(Plaintiff counsel prays time for cross examination.  Time granted).

(Computerized to my dictation in the open court as deposed by the witness.)

**R. O. I. & A. C.,**

**(MAMTAZ)**
**IX Addl. C.C. & S.J., Bengaluru.**

**ದಿಃ-08-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ವಾದಿ ಪರ ಶ್ರೀ. ಎನ್.ಎಸ್.ಆರ್ ವಕೀಲರಿಂದ ಃ**

1. ನಾನು 7 ನೇ ತರಗತಿವರಗೆ ಓದಿರುತ್ತೇನೆ. ನಾನು ಈಗ ಚಿಲ್ಲರೆ ಅಂಗಡಿ ಇಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಈ ವಿಚಾರವನ್ನು ನಮೂದಿಸಿಲ್ಲ ಎಂದರೆ ಆ ಬಗ್ಗೆ ನನಗೆ ನೆನಪಿಲ್ಲ. ವಾದಿಯ ಪರಿಚಯ ನನಗೆ ಇದೆ. ನಾವು ಅಕ್ಕ ಪಕ್ಕದ ನೆರೆಕರೆಯವರು ಎಂದರೆ ಸರಿ.

2. ನನ್ನ ಮೇಲೆ ಹೂಡಿದ್ದ ದಾವೆಯ ವಿಚಾರ ಮತ್ತು ಸಂಗತಿಗಳು ನನಗೆ ಗೊತ್ತು. ನಾನು ಅವರ ಜಾಗದಲ್ಲಿ ಮನೆ ಕಟ್ಟಿದ್ದೇನೆಂದು ದಾವೆ ಹೂಡಿದ್ದು ಆದರೆ ನಾನು ಅವರ ಜಾಗದಲ್ಲಿ ಮನೆಯನ್ನು ಕಟ್ಟಿಲ್ಲ. ವಾದಿಯವರು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಮತ್ತು ಆ ಬಗ್ಗೆ ನನಗೆ ಗೊತ್ತಿಲ್ಲ. ನಾನು ವಕೀಲರಲ್ಲಿ ಆ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲ.

3. ನಾನು ಖರೀದಿಸಿದ ನಿವೇಶನದ ವಿಸ್ತೀರ್ಣ 20*30 ಚದರ ಅಡಿ ಇದೆ. ವಾದಿಯವರ ನಿವೇಶನದ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾನು ಮನೆ ಕಟ್ಟುವ ಮೊದಲು ವಾದಿಯವರು ಮನೆ ಕಟ್ಟಿರುವುದಿಲ್ಲ. ಸಾಕ್ಷಿ ಮುಂದುವರಿದು ವಾದಿಯವರು ಮನೆ ಕಟ್ಟಿದ್ದರು ಎಂದು ನುಡಿಯುತ್ತಾರೆ. ನಾನು ಜಾಗವನ್ನು ಖರೀದಿಸುವಾಗ ಹಳೆಯ ಮನೆಯೊಂದಿದ್ದು ಆನಂತರ ವಾದಿಯವರು ಸ್ವತ್ತನ್ನು ಖರೀದಿಸಿರುತ್ತಾರೆ. ನಾನು ಹಳೆಯ ಮನೆಯನ್ನು ಕೆಡವಿದಾಗ ವಾದಿಯವರು ಮನೆಯನ್ನು ಕಟ್ಟಿರುತ್ತಾರೆ. ವಾದಿಯವರು ಮನೆಯನ್ನು ಕಟ್ಟುವಾಗ ನಾನು ಗಮನಿಸಿರುವುದಿಲ್ಲ.

4. ವಾದಿಯವರು ಮನೆ ಕಟ್ಟಿದ ನಂತರ ಎಷ್ಟು ಜಾಗ ಬಿಟ್ಟು ಕಟ್ಟಿದ್ದಾರೆ ಎಂಬ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಮನೆಯನ್ನು ಕಟ್ಟುವಾಗ ಆ ಮನೆಯ ಸುತ್ತ ಜಾಗವನ್ನು ಬಿಟ್ಟು ಕಟ್ಟಿರುವುದಿಲ್ಲ. ಆ ಮನೆಯನ್ನು ಕಟ್ಟುವಾಗ ಯಾವುದೇ ಪ್ಲಾನನ್ನು ಪಡೆದಿರುವುದಿಲ್ಲ.

ಪ್ರಶ್ನೆ ಃ ವಾದಿಯವರು ಮನೆ ಕಟ್ಟುವಾಗ ನಿಮ್ಮ ಜಾಗವನ್ನು ಒತ್ತುವರಿ ಮಾಡಿ ಕಟ್ಟಿಲ್ಲ?

ಉತ್ತರ ಃ ವಾದಿಯವರು ನನ್ನ ಗೋಡೆಗೆ ಹೊಂದಿಸಿ ಪ್ಯಾರಾಪಟ್ ವಾಲ್ ಕಟ್ಟಿರುತ್ತಾರೆ. ಅವರು ಗೋಡೆಯನ್ನು ಒಂದನೇ ಮಹಡಿ ಮೇಲೆ ಕಟ್ಟುತ್ತಾ ನಮ್ಮ ಜಾಗಕ್ಕೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

5. ಸಾಕ್ಷಿಗೆ ನಿ.ಡಿ.1 ಫೋಟೋವನ್ನು ತೋರಿಸಿ ಇದರಲ್ಲಿ ಎಲ್ಲಿ ವಾದಿಯವರು ಒತ್ತುವರಿ ಮಾಡಿ ಒಂದನೇ ಮಹಡಿಯನ್ನು ಕಟ್ಟಿದ್ದಾರೆ ಎಂದು ತೋರಿಸಲು ಕೇಳಿದಾಗ ಸಾಕ್ಷಿಯು ಅದನ್ನು ಪರಾಂಬರಿಸಿ ನಾನು ಒಂದನೇ ಮಹಡಿಯನ್ನು ಕಟ್ಟುವ ಸಂದರ್ಭದಲ್ಲಿ ಅವರ ಒಂದನೇ ಮಹಡಿಯ ಗೋಡೆಯು ತಡೆದಿದ್ದು ನಾನು ಅದಕ್ಕೆ ತಾಗಿಸಿಕೊಂಡು ನನ್ನ ಕಟ್ಟಡವನ್ನು ಕಟ್ಟಿ ಸಂಪೂರ್ಣಗೊಳಿಸಿದ್ದೀನಿ ಎಂದು ನುಡಿಯುತ್ತಾರೆ. ಈಗ ಹೇಳಿದ ಈ ವಿಚಾರವನ್ನು ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ನೆನಪಿಲ್ಲ. ಈ ವಿಚಾರವಾಗಿ ನಾನು ಯಾವ ಪ್ರಾಧಿಕಾರದಲ್ಲೂ ದೂರನ್ನು ನೀಡಿಲ್ಲ.

6. ವಾದಿಯವರ ಮನೆಯ ಪೂರ್ವದ ಕಡೆ ಪ್ಯಾರಾಪಟ್ ವಾಲ್ ಒಳಗಡೆ ಮತ್ತು ಹೊರಗಡೆ ಒಂದೂವರೆ ಅಡಿ ಜಾಗ ಬಿಟ್ಟು ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ.

7. ನಿ.ಪಿ.6 ಫೋಟೋವನ್ನು ಸಾಕ್ಷಿಗೆ ತೋರಿಸಿ ಆ ಫೋಟೋದಲ್ಲಿ ತಮ್ಮ ಗೋಡೆಗಳು ಕಾಣುತ್ತಿವೆ ಎಂದರೆ ಸಾಕ್ಷಿಯು ಅದು ಯಾವ ಗೋಡೆ ಎಂದು ಗುರುತಿಸಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಅದು ನಮ್ಮ ಕಟ್ಟಡದ ಗೋಡೆ ಅಲ್ಲ ಎಂದು ನುಡಿಯುತ್ತಾರೆ. ನಿ.ಪಿ.6 ರಲ್ಲಿ ಕಾಣಿಸಿರುವ ಕಟ್ಟಡವು ನನ್ನ ಕಟ್ಟಡ ಎಂದರೆ ಫೋಟೋ ಸರಿಯಾಗಿ ಕಾಣದೇ ಇದ್ದುದ್ದರಿಂದ ನನಗೆ ಗುರುತಿಸಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ.

8. ನಾನು ವಾದಿಯವರು ಪ್ರಸ್ತುತ ವಾಸ ಮಾಡುತ್ತಿರುವ ಮನೆಯನ್ನು ನೋಡಿದ್ದೇನೆ. ನಿ.ಪಿ.6 ರ ಉತ್ತರ-ಪೂರ್ವಕ್ಕೆ ಮುಖ ಮಾಡಿ ಇರುವ ಪ್ಯಾರಾಪಟ್ ವಾಲ್ ವಾದಿಯವರದ್ದು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅದರಲ್ಲಿ ಕಾಣುತ್ತಿರುವ ಗೋಡೆಯು ನಮ್ಮದಲ್ಲ ಎಂದು ನುಡಿಯುತ್ತಾರೆ. ನಾನು ಗೋಡೆಯನ್ನು ಒತ್ತುವರಿ ಮಾಡಿ ಉತ್ತರ-ಪೂರ್ವಕ್ಕೆ ಗೋಡೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ.

9. ವಾದಿಯವರು ಪ್ಯಾರಾಪಟ್ ವಾಲ್ ನ್ನು ಕಟ್ಟುವಾಗ ನಾನು ಯಾವ ರೀತಿಯ ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಅದನ್ನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ವಾದಿಯವರ ಪ್ಯಾರಾಪಟ್ ವಾಲ್ ಹೊರಗಡೆ ಇರುವ ಒಂದೂವರೆ ಅಡಿ ಖಾಲಿ ಜಾಗ ಮತ್ತು ಅದರ ಮೇಲೆ ನಾನು ಒತ್ತುವರಿ ಮಾಡಿ ಕಟ್ಟಿರುವ ಒಂದೂವರೆ ಅಡಿ ಜಾಗ ನನ್ನ ಕ್ರಯ ಪತ್ರದಂತೆ ಅದು ನನಗೆ ಸಂಬಂಧಿಸಿದ ಜಾಗ ಅಲ್ಲ ಎಂದರೆ ಸರಿಯಲ್ಲ. ನಾವು ಹೇಳುವಂತೆ ನೀವು ಒತ್ತುವರಿ ಮಾಡಿದ್ದೀರೋ ಇಲ್ಲವೋ ಎಂದು ನೋಡಲು ನ್ಯಾಯಾಲಯದ ಕಡೆಯಿಂದ ಕಮಿಷನರ್ ನವರನ್ನು ನೇಮಿಸಿ ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಪಡೆಯುವಲ್ಲಿ ನನ್ನದು ಯಾವುದೇ ಅಭ್ಯಂತರವಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**